ಬೀದರ್ ಜಿಲ್ಲೆಯಲ್ಲಿನ ಭಾರೀ ಕೈಗಾರಿಕೆಗಳು

2268 (2599); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ; ಇವುಗಳಲ್ಲಿ ಎಷ್ಟು ಜನ ಹೊರ ಹಾಗೂ ಸ್ಥಳೀಯ ಕಾರ್ಮಿಕರಿಗೆ ಉದ್ಯೋಗ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು);

ಆ) ಈ ಕೈಗಾರಿಕೆಗಳಲ್ಲಿ ಎಷ್ಟು ಕೈಗಾರಿಕೆಗಳು ಉತ್ತಮ ಸ್ಥಿತಿಯಲ್ಲಿವೆ;

ಇ) ಬಹಳಷ್ಟು ಕಾರ್ಖಾನೆಗಳ ಮಾಲೀಕರು, ಕಾರ್ಮಿಕರಿಗೆ ಕನಿಷ್ಟ ವೇತನ ಹಾಗೂ ಭದ್ರತೆ ಒದಗಿಸದೇ ಕಾನೂನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅಂತಹ ಮಾಲೀಕರ ಮೇಲೆ ಕ್ರಮ ಜರುಗಿಸಿ ಕಾರ್ಮಿಕರ ರಕ್ಷಣೆಗೆ ಸರ್ಕಾರ ಮುಂದಾಗುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೀದರ್ ಜಿಲ್ಲೆಯಲ್ಲಿ 10 ಭಾರಿ ಮತ್ತು 03 ಮಧ್ಯಮ ಹೀಗೆ ಒಟ್ಟು 13 ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಈ ಕೈಗಾರಿಕೆಗಳಲ್ಲಿ ಒಟ್ಟು 3377 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ. ಈ ಪೈಕಿ 186 ಹೊರ ಜನರಿಗೆ ಹಾಗೂ 3191 ಸ್ಥಳೀಯ ಕಾರ್ಮಿಕರಿಗೆ ಉದ್ಯೋಗ ನೀಡಲಾಗಿದೆ. ಕೈಗಾರಿಕೆಗಳ ಸಂಪೂರ್ಣ ವಿವರ ಈ ಕೆಳಗಿನಂತಿದೆ.

DETAILS OF LARGE INDUSTRIES

Sl. No.	Name of the Unit	Product Manufactured	Investment (₹ in Crores)	Employment		
				Total	Local	Outside
1	2	3	4	5	6	7
1	Bidar Sahakari Sakkare Karkhane Niyamita, Hallikhed-B Tq Humnabad	Sugar	44 74	921	919	2

2	Naranja Sahakara Sakkare Karkhane Niyamita, Imampur, Janwad, Bidar	Sugar	83 05	530	506	24
3	Mahatma Gandhi Sahakara Sakkare, Hunaji-A, Bhalki	Sugar	36 69	214	199	15
4	Geodesics Technologies Pvt Ltd, Plot No 298, KIADB Kolhar Bidar	Heavy Engineering works	14 77	59	38	21
5	Carvin Chemicals & Pharmaceuticals, Plot No 135-E, Kolhar KIADB, Bidar	Bulk Drugs	12 05	100	87	13
6	Gampa Alcoats Ltd, Plot No 12-A, Kolhar KIADB, Bidar	Metalizedf Paper	10 5	50	49	1
7	Sai Life Science Limited, Plot No 80 A, 80-B, 81-A, & 82, Kolhar Industrial area, Bidar	Bulk Drugs and its Intermediates	100	488	436	52
8	Nectar Crop Sciences Ltd, Plot No 50, 82, 83, 84 Humnabad KIADB	Pesticide Technicals	36	99	85	14
9	M/s Bhalkeshwar Sugars Ltd, Bajolga, Tq Bhalki	Sugar & Power generation	95	454	433	18
10	M/s Bidar Solar Power Limitted, at Bemalkheda, Tq Humnabad	Solar Power	50	25	23	2
	TOTAL		482.5	2937	2775	162

DETAILS OF MEDIUM INDUSTRIES

Sl. No.	Name of the Unit	Product Manufactured	Investment (₹ in Crores)	Employment		
				Total	Local	Outside
1	2	3	4	5	6	7
1	Gemini Graphics Pvt Ltd, No 44/45, Naubbad I A, Bidar	Paper printing	7 61	270	266	4
2	M/s R Chem (S) Pvt Ltd, Plot No 122/A, KIADB Humnabad, Dir P Sureshbabu	Bulk Drugs and Intermidates	7 92	93	84	9
3	Satyadeeptha Pharmaceuticals Ltd, Plot No 101-A, KIADB Industria area, Humnabad	Bulk Drug & Intermediates	35	77	66	11
	TOTAL		50.53	440	416	24
	GRAND TOTAL		533.03	3377	3191	186

ಆ) ಎಲ್ಲಾ 13 ಕೈಗಾರಿಕಾ ಘಟಕಗಳು ಉತ್ತಮ ಸ್ಥಿತಿಯಲ್ಲಿವೆ.

ಇ) ಬೀದರ್ ಜಿಲ್ಲೆಯಲ್ಲಿರುವ ಕಾರ್ಖಾನೆಗಳ ಮಾಲೀಕರುಗಳು ಕಳೆದ ಮೂರು ವರ್ಷಗಳಲ್ಲಿ (2012–13, 2013–14 ಹಾಗೂ 2014–15 ನೇ ಸಾಲಿನಲ್ಲಿ) ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿಸದೆ ಇರುವ ಹಾಗೂ ಭದ್ರತೆ ಒದಗಿಸದೆ ಇರುವ ಪ್ರಕರಣಗಳು ಕಂಡುಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ. ಆದಾಗ್ಯೂ ಕಾರ್ಖಾನೆಗಳ ಮಾಲೀಕರುಗಳು ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿಸದೆ ಇರುವ ಹಾಗೂ ರಕ್ಷಣೆ ಒದಗಿಸದೆ ಇರುವ ಪ್ರಕರಣಗಳು ಕಂಡು ಬಂದಲ್ಲಿ, 1948 ರ ಕನಿಷ್ಠ ವೇತನ ಕಾಯ್ದೆ ಹಾಗೂ ಇತರೆ ಕಾಯ್ದೆಗಳಡಿ ಕಾರ್ಮಿಕ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು.

ಸಂಚಾರಿ ಪಶು ಚಿಕಿತ್ಸಾಲಯಗಳು

2269 (2600); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಸಂಚಾರಿ ಪಶು ಚಿಕಿತ್ಸಾಲಯಗಳಿವೆ; (ವಿವರ ನೀಡುವುದು);

ಆ) ಭಾಲ್ಕಿ ಸಂಚಾರಿ ಪಶು ಚಿಕಿತ್ಸಾಲಯಕ್ಕೆ ವೈದ್ಯಾಧಿಕಾರಿ ಹುದ್ದೆಯನ್ನು ಮಂಜೂರು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಹುದ್ದೆ ಮಂಜೂರು ಮಾಡಿ ವೈದ್ಯಾಧಿಕಾರಿಯನ್ನು ನೇಮಕ ಮಾಡಲು ಶೀಘ್ರ ಕ್ರಮ ಜರುಗಿಸಲಾಗುವುದೇ?